

ಜಾರ್ಬಿಂಗ್ ಬಲೂನ್‌ನಲ್ಲಿ ಸೆಣಸಾಟ

ಇನ್ನೊಂದು 'ರೈಫಲ್ ಶೂಟಿಂಗ್' ಈ ಆಟವನ್ನು ಸಂಪೂರ್ಣ ಸಿನಿಮೀಯ ರೀತಿಯಲ್ಲಿ ಹೆಣೆದಿದ್ದಾರೆ. ಈ ಆಟದ ಸ್ಪರ್ಧಿಗಳೆಲ್ಲಾ ಸೈನಿಕರಾಗುತ್ತಾರೆ. ಎರಡು ಗುಂಪುಗಳನ್ನಾಗಿ ವಿಭಾಗಿಸಿ ಸೈನಿಕರ ಸಮವಸ್ತ್ರ ನೀಡುತ್ತಾರೆ. ಎರಡು ದೇಶದ ಗಡಿರೇಖೆಯನ್ನು ಗುರುತಿಸಿ ಉತ್ತರ– ದಕ್ಷಿಣ ದಿಕ್ಕಿನಲ್ಲಿ ಪರಸ್ಪರ ಎದುರಾಳಿ ಪಡೆಯನ್ನು ನಿಲ್ಲಿಸುತ್ತಾರೆ. ಉಭಯ ಸೈನಿಕರ ನಡುವೆ ಯುದ್ಧವನ್ನು ಸಾರುತ್ತಾರೆ. ಎರಡು ದೇಶಗಳ ಮಾರಾಮಾರಿಯಲ್ಲಿ ಯಾವ ಗುಂಪಿನ ಸೈನಿಕರು ಗುಂಡನ್ನು ಎದುರಾಳಿ ಸೈನಿಕರ ದೇಹದ ಮೇಲೆ ಗುರುತಾಗುವಂತೆ ಹೊಡೆದಿರುತ್ತಾರೋ ಅವರಿಗೆ ಒಂದು ಅಂಕವನ್ನು ನೀಡಲಾಗುತ್ತದೆ. ಈ ಗುಂಡುಗಳು ಪ್ಲಾಸ್ಟಿಕ್ ಹೊರಕವಚದಿಂದ ಕೂಡಿದ್ದು, ಒಳಭಾಗದಲ್ಲಿ ನೈಸರ್ಗಿಕ ಬಣ್ಣವನ್ನು ತುಂಬಿರುತ್ತಾರೆ. ಗುಂಡನ್ನು ಸಿಡಿಸಿದಾಗ ಅದು ಒಡೆದು ಅದರ ಬಣ್ಣ ಬಟ್ಟೆಯನ್ನು ಆವರಿಸುತ್ತದೆ. 10 ನಿಮಿಷದ ಈ ಕಾಳಗದಲ್ಲಿ ಪ್ರತಿ ಸೈನಿಕನಿಗೆ 15 ಗುಂಡುಗಳನ್ನು ತುಂಬಿದ ಬಂದೂಕನ್ನು ನೀಡಿರುತ್ತಾರೆ.

ಆಲ್ ಟೆರೈನ್ ವೆಹಿಕಲ್ (ಎಟಿವಿ) ಸವಾರಿಯಂತೂ ತುಂಬಾ ಕೌಶಲ್ಯ ಹಾಗೂ ಧೈರ್ಯವನ್ನು ಬಯಸುವ ಆಟ. ಮಾರಿಗಾಲಿಯ ಈ ಗಾಡಿಗಳನ್ನು ಪಳಗಿಸಲು ಎಂಟೆದೆ ಬೇಕು. ಇದರಲ್ಲಿ ಜೀಪ್, ಬೈಕ್‌ಗಳಿವೆ. ಮಕ್ಕಳಿಗೆ ಮಹಿಳೆಯರಿಗೆ ಕ್ರೀಡಾ ಸೈಕಲ್ ಕೂಡ ಇದೆ. ಎಲ್ಲಾ ವಯೋಮಾನದವರೂ ಒಂದು ಕೈ ನೋಡಬಹುದು. ಬೆಟ್ಟವನ್ನೇ ಸೀಳಿ ಮಾಡಿದ ಟ್ರ್ಯಾಕ್‌ನಲ್ಲಿ ಸವಾರಿ ಹೊರಟ ನಿಮಗೆ ಅನಿರೀಕ್ಷಿತವಾಗಿ ಎದುರಾಗುವ ಕಡಿದಾದ ತಿರುವು ಸವಾಲನ್ನು ಒಡ್ಡುತ್ತಲೇ ಇರುತ್ತವೆ. ಸಿಂಗಲ್ ಗೇರ್‌ನಲ್ಲಿಯೇ 1.5 ಕಿ.ಮೀ ದೂರದ ಒಂದು ವೃತ್ತವನ್ನು ಸುತ್ತುವಷ್ಟರಲ್ಲಿ ಸಾಕಷ್ಟು ಇಳಿಜಾರು, ಎದೆಯೆತ್ತರದ ದಿಬ್ಬ, ಚಕ್ರಗಳು ಕುಣಿ ಕುಣಿದು ನೆಲ ಕಚ್ಚುವಂತೆ ಕೃತಕವಾಗಿ ನಿರ್ಮಿಸಿದ ಸಿಮೆಂಟ್ ಹಾಗೂ ಮರದ ಪೋಲ್‌ಗಳಿಂದ ನಿರ್ಮಿಸಿರುವ ಹಂಪ್‌ಗಳನ್ನು ನೆಗೆಸಿ ಆರಂಭಿಕ ಸ್ಥಳ ತಲುಪಿದವರು ರೋಮಾಂಚನದಿಂದ ವೀರಾಧಿ ವೀರರಂತೆ ಹೆಲ್ಮೆಟ್ ಎತ್ತಿಹಿಡಿದು ಕುಣಿಯುತ್ತಾರೆ.

ಪರ್ವತಾರೋಹಿಯ ಅನುಭವ ನೀಡುವ ಹೈರೋಪ್, ಹಾರ್ನೆಸ್ಸ್ ಕೋರ್ಸ್, ನೆಟ್‌ಕೋರ್ಸ್‌ಗಳು ಸ್ಪರ್ಧಾಳುಗಳ ದೇಹವನ್ನು ಬಳ್ಳಿಯಂತೆ ಬಳುಕಿಸಿ ಬಿಡುತ್ತವೆ. ಇಲ್ಲಿ ಮಕ್ಕಳಿಗೆ ಪ್ರತ್ಯೇಕ ನೆಟ್ ಕೋರ್ಸ್ ರೂಪಿಸಲಾಗಿದೆ. ಯುವಕ– ಯುವತಿಯರಿಗೆ ಹಂತದ ಹಂತದ ಹತ್ತಾರು ಪರೀಕ್ಷೆಯ ಬಳಿಕ ಖುಷಿಯಿಂದ 40 ಅಡಿ ನೆಟ್‌ನಿಂದ ಜಾರಿ ನೆಲಕ್ಕೆ ಬರುತ್ತಾರೆ. ಭಾಗವಹಿಸಿದ ಎಲ್ಲರಿಗೂ ಹುಮ್ಮಸ್ಸು ತುಂಬುವ ತರಬೇತುದಾರ ಮಾರ್ಗದರ್ಶಕರು ಅಡಿಗಡಿಗೂ ಗುಡ್ ಎಂದು ಚಪ್ಪಾಳೆ ತಟ್ಟುತ್ತಾರೆ. ಇದೇ ತಂತ್ರವನ್ನು 'ಹೈ ರೋಪ್ ಕೋರ್ಸ್'ನಲ್ಲಿ ಹೆಣೆಯಲಾಗಿದೆ. ಆದರೆ ಕೆಳಗಡೆ ಬಲೆಯನ್ನು ಹೆಣೆದಿರುವುದಿಲ್ಲ. ಸ್ಪರ್ಧಿಯ ಪ್ರಾಣಕ್ಕೆ ತೊಂದರೆಯಾಗದಂತೆ ಬೇರೆಯ ಸುರಕ್ಷತಾ ಕ್ರಮವನ್ನು ಅನುಸರಿಸಲಾಗುತ್ತದೆ. ಅದು ಕಣ್ಣಿಗೆ ಕಾಣದೆ



ಎಟಿವಿ ಸಾಹಸದ ಮೋಡಿ

ಭೀತಿಯಿಂದ ಎದೆ ಡವಗುಟ್ಟುತ್ತದೆ.

ಗುಂಡಿಗೆ ಗಟ್ಟಿ ಇರುವವರಿಗೆ 'ಜಾರ್ಬಿಂಗ್' ಸಮಾರು ನಾಲ್ಕು ಮಾರು ಗಾತ್ರದ ದೊಡ್ಡ ಬಲೂನ್. ಅದರೊಳಗೆ ಎರಡು ದೇಹಗಳು ಬಂದಿಯಾಗಿ ಇಳಿಜಾರಿನಲ್ಲಿ 220 ಅಡಿಯಷ್ಟು ಉರುಳಬೇಕು. ಕಡಿದಾದ ಇಳಿಜಾರಿನಲ್ಲಿ ಬಲೂನ್ ಮೇಲಕ್ಕೆ ಹಾರಿ ಬೀಳುವುದರಿಂದ ಒಳಗಿದ್ದವರ ಗುಂಡಿಗೆ ಹೊರಬಂದಂತೆ ಆಗುತ್ತದೆ. ಅಷ್ಟರಲ್ಲಾಗಲೇ ಗುರಿಮುಟ್ಟಿ ಖುಷಿಯಿಂದ ಬಲೂನ್‌ನಿಂದ ದೇಹ ಹೊರ ಬಂದಿರುತ್ತದೆ.

ಫುಟ್‌ಬಾಲ್ ಮಾದರಿಯಲ್ಲಿಯೇ 'ಹ್ಯೂಮನ್ ಫೂಸ್‌ಬಾಲ್' ಎಂಬ ಆಟವನ್ನೂ ಇಲ್ಲಿ ಪರಿಚಯಿಸಿದ್ದಾರೆ. ಇಲ್ಲಿ ಎರಡು ತಂಡಗಳನ್ನು ರಚಿಸಿ, ನಿರ್ದಿಷ್ಟ ಸ್ಥಳದಲ್ಲಿಯೇ ನಿಂತು ಗೋಲ್ ಬಾರಿಸುವ ಕ್ರೀಡಾ ಸ್ಪರ್ಧೆ ಎಂತಹವರಲ್ಲಿಯೂ ಉತ್ಸಾಹವನ್ನು ಪುಟಿದೆಬ್ಬಿಸುವಂತೆ ಮಾಡುತ್ತದೆ. ಇದರ ಜೊತೆಗೆ ಸೊಮೋ, ಭಂಗಿಜಂಪ್ ಸೇರಿದಂತೆ ಇನ್ನೂ ಕೆಲವು ಆಟೋಟಗಳು ದಣಿದ ದೇಹ ಮನಸ್ಸಿಗೆ ಮುದ ನೀಡುವ ಜೊತೆಗೆ ದೇಹವನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತವೆ. ಅಧಿಕೃತವಾಗಿ 'ಸಾಹಸ' ಉದ್ಘಾಟನೆ ಆಗಿಲ್ಲ. ಹಾಗಾಗಿ ಇಲ್ಲಿನ ಆಟಗಳಿಗೆ ಪ್ರವೇಶ ಶುಲ್ಕವನ್ನು ನಿಗದಿಪಡಿಸಿಲ್ಲ. ಸದ್ಯ ಇದನ್ನು ಕಾರ್ಪೋರೆಟ್ ಸಿಬ್ಬಂದಿಗೆ ನೀಡಲಾಗುತ್ತಿದೆ. ಅವರಿಗೆ ವಿಧಿಸಲಾಗುವ ಪ್ಯಾಕೇಜ್ ವ್ಯವಸ್ಥೆಯಲ್ಲಿ ಇದನ್ನು ಕಲ್ಪಿಸಲಾಗುತ್ತಿದೆ. ಪ್ರತಿ ಆಟಗಳಿಗೂ 150ರೂಪಾಯಿಂದ 250ರವರೆಗೆ ನಿಗದಿ ಪಡಿಸಬಹುದು. ಏನೇ ಆದರೂ ಆತ್ಮವಿಶ್ವಾಸ, ಧೈರ್ಯವನ್ನು ತುಂಬುವ ಇಲ್ಲಿನ ಅನೇಕ ಆಟಗಳು ನಾಯಕತ್ವದ ಗುಣವನ್ನು ತುಂಬುತ್ತವೆ. ಒಬ್ಬರು–ಇಬ್ಬರು ಆದರೆ ಕೆಲವು ಆಟಗಳನ್ನು ಆಡಲು ಆಗುವುದಿಲ್ಲ. ಅದಕ್ಕೆ ಅನುಕೂಲವಾಗುವಂತೆ ಸ್ನೇಹಿತರ ಗುಂಪಿದ್ದರೆ ಅದರ ಮಜವೇ ಬೇರೆ.